# ಧೋನಿ ಹಾದಿಯಲ್ಲಿ ಇಶಾನ್ ಕಿಶನ್

■ ಪ್ರಮೋದ

ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಭಾರತ ತಂಡಕ್ಕೆ ಆಯ್ಕೆಯಾಗಿದ್ದರಿಂದ ಆತನಲ್ಲಿ ಸಂಭ್ರಮ ಮನೆ ಮಾಡಿತ್ತು. ಆದರೆ ಈ ಬಾರಿಯ ಐಪಿಎಲ್‌ನಲ್ಲಿ ಬ್ಯಾಟ್ ಮೂಲಕ ಸಾಮರ್ಥ್ಯ ಹೊರಹೊಮ್ಮಲಿಲ್ಲ. ಮೊದಲ ಎಂಟು ಇನಿಂಗ್ಸ್‌ಗಳಲ್ಲಿ ಕಲೆಹಾಕಿದ್ದು ಕೇವಲ 107 ರನ್.

ಅವರೇ ಇಶಾನ್ ಕಿಶನ್. ಈ ಕೊರಗು ಪರಿಪರಿಯಾಗಿ ಅವರನ್ನು ಕಾಡುತ್ತಿತ್ತು. ಮುಂಬೈ ಇಂಡಿಯನ್ಸ್ ತಂಡದ ಇಶಾನ್ ಇದರಿಂದ ಮಾನಸಿಕವಾಗಿ ಕುಗ್ಗಿದ್ದರು. ಬ್ಯಾಟಿಂಗ್ ವೈಫಲ್ಯದ ಕೊರಗನ್ನು ಆರ್‌ಸಿಬಿ ತಂಡದ ನಾಯಕ ವಿರಾಟ್ ಕೊಹ್ಲಿ ಮುಂದೆ ಹೇಳಿಕೊಂಡಿದ್ದರು. ಕೊಹ್ಲಿ ಹಲವು ಸಲಹೆಗಳನ್ನು ನೀಡಿ ಮೈದಾನದಲ್ಲಿ ಹೆಜ್ಜೆ ಹಾಕುತ್ತಾ ಆತನ ವಿಶ್ವಾಸ ಹೆಚ್ಚಿಸಿದ್ದರು. ನಂತರದ ಎರಡು ಪಂದ್ಯಗಳಿಂದ ಇಶಾನ್ ಗಳಿಸಿದ್ದು 134 ರನ್!

ಹೀಗೆ ಐಪಿಎಲ್‌ನಂಥ ಪ್ರತಿಷ್ಠಿತ ಟೂರ್ನಿಯಲ್ಲಿಯೂ ಎದುರಾಳಿ ತಂಡದ ನಾಯಕನಿಂದ ಸಲಹೆ ಪಡೆದು 'ನಿರಂತರ ಕಲಿಕೆ'ಯ ಗುಣ ರೂಢಿಸಿಕೊಂಡವರು ಇಶಾನ್ ಕಿಶನ್. ಎಡಗೈ ಬ್ಯಾಟ್ಸ್‌ಮನ್ ಮತ್ತು ವಿಕೆಟ್ ಕೀಪರ್ ಇಶಾನ್ ಭಾರತದ ಕ್ರಿಕೆಟ್‌ನಲ್ಲಿ ಗಟ್ಟಿ ಹೆಜ್ಜೆಗುರುತು ಮೂಡಿಸುತ್ತಿದ್ದಾರೆ.

ವಿವಾದ, ವೈಫಲ್ಯ, ಕಳಪೆ ಪ್ರದರ್ಶನ – ಹೀಗೆ ಅನೇಕ ಏಳುಬೀಳುಗಳ ನಡುವೆ ಇಶಾನ್ ಕ್ರಿಕೆಟ್ ಬದುಕು ರೂಪಿಸಿಕೊಂಡವರು. ಮೂಲತಃ ಬಿಹಾರ್‌ನ ಪಟ್ನಾದ ಈ ಕ್ರಿಕೆಟಿಗ 2016ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಗೆ ಭಾರತ ತಂಡವನ್ನು ಮುನ್ನಡೆಸಿದ್ದರು.

ಆರಂಭದ ದಿನಗಳಲ್ಲಿ ಇಶಾನ್‌ಗೆ ಕ್ರಿಕೆಟ್ ಬಗ್ಗೆ ಆಸಕ್ತಿ ಇರಲಿಲ್ಲ. ಅವರ ಸಹೋದರ ರಾಜಕಿಶನ್ ಕ್ರಿಕೆಟ್ ಬಗ್ಗೆ ಪ್ರೀತಿ ತುಂಬಿದರು. ನಿರಂತರವಾಗಿ ತರಬೇತಿಗೆ ಹೋಗುವಂತೆ ಮಾಡಿದ ಬಳಿಕ ಇಶಾನ್ ವೃತ್ತಿಪರ ಕ್ರಿಕೆಟಿಗರಾಗಿ ಬದಲಾದರು. ಬಿಹಾರ ಕ್ರಿಕೆಟ್ ಸಂಸ್ಥೆ ಮತ್ತು ಬಿಸಿಸಿಐ ನಡುವಿನ ತಿಕ್ಕಾಟದಿಂದಾಗಿ ಬಿಹಾರದಲ್ಲಿದ್ದುಕೊಂಡೇ ಕ್ರೀಡಾಬದುಕು ಕಟ್ಟಿಕೊಳ್ಳುವುದು ಇಶಾನ್‌ಗೆ ಕಷ್ಟವಾಯಿತು. ಮಹೇಂದ್ರ ಸಿಂಗ್ ಧೋನಿ ಸಲಹೆ ಮೇರೆಗೆ ಪಕ್ಕದ ರಾಜ್ಯ ಜಾರ್ಖಂಡ್‌ಗೆ ವಲಸೆ ಹೋದರು. ಅಲ್ಲಿ ಹೊಸ ಪ್ರತಿಭೆ ಇಶಾನ್‌ಗೆ ಧೋನಿ ಗುರುವಾದರು.

ಆಗಿನಿಂದ ಇಶಾನ್ ಕ್ರಿಕೆಟ್ ಬದುಕು ಪ್ರಜ್ವಲಿಸತೊಡಗಿತು. 2016–17ರ ರಣಜಿ ಟೂರ್ನಿಯ ದೆಹಲಿ ವಿರುದ್ಧದ ಪಂದ್ಯದಲ್ಲಿ 273 ರನ್ ಗಳಿಸಿದರು. ಇದು ರಣಜಿಯಲ್ಲಿ ಜಾರ್ಖಂಡ್ ತಂಡದ ಬ್ಯಾಟ್ಸ್‌ಮನ್ ಒಬ್ಬರು ಗಳಿಸಿದ ವೈಯಕ್ತಿಕ ಗರಿಷ್ಠ ಸ್ಕೋರ್ ದಾಖಲೆಯಾಗಿದೆ. 2017–18ರ ರಣಜಿಯಲ್ಲಿ ಒಟ್ಟು 484 ರನ್ ಗಳಿಸಿ ಟೂರ್ನಿಯಲ್ಲಿ ಒಟ್ಟು ಹೆಚ್ಚು ರನ್ ಗಳಿಸಿದ ಜಾರ್ಖಂಡ್ ಆಟಗಾರರ ಪಟ್ಟಿಯಲ್ಲಿ ಅಗ್ರಸ್ಥಾನ ಸಂಪಾದಿಸಿದರು.




ದೇಶಿ ಟೂರ್ನಿಗಳಲ್ಲಿ ತೋರಿದ ಬ್ಯಾಟಿಂಗ್ ಸೊಗಸು ಐಪಿಎಲ್‌ನಲ್ಲಿ ಅವಕಾಶದ ಬಾಗಿಲು ತೆರೆಯಿತು. ಮುಂಬೈ ಇಂಡಿಯನ್ಸ್ ತಂಡದಲ್ಲಿ ಸ್ಥಾನ ಗಳಿಸಿದರು. 2018–19ರ ವಿಜಯ ಹಜಾರೆ ಟೂರ್ನಿಯಲ್ಲಿ ಒಂಬತ್ತು ಪಂದ್ಯಗಳಿಂದ 405 ರನ್ ಕಲೆಹಾಕಿ ಗಮನ ಸೆಳೆದರು. ದೇವಧರ್ ಟ್ರೋಫಿ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಹೀಗೆ ಒಂದಾದ ಮೇಲೊಂದರಲ್ಲಿ ನಿರಂತರವಾಗಿದ ದೇಶಿ ಟೂರ್ನಿಗಳಲ್ಲಿ ಅವಕಾಶ ಗಿಟ್ಟಿಸಿದರು. ಇಶಾನ್ ಎರಡು ಏಕದಿನ, ಮೂರು ಟ್ವೆಂಟಿ–20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿದ್ದಾರೆ.

ಈ ಸಲದ ಐಪಿಎಲ್ ಆರಂಭದಲ್ಲಿ ರನ್‌ಗಳ ಕೊರತೆ ಎದುರಿಸಿದ ಇಶಾನ್ ಹಿಂದಿನ ಐಪಿಎಲ್ ಟೂರ್ನಿಯಲ್ಲಿ 14 ಪಂದ್ಯಗಳಿಂದ 516 ರನ್ ಗಳಿಸಿ ಮುಂಬೈ ಇಂಡಿಯನ್ಸ್ ಪರ ಹೆಚ್ಚು ರನ್ ಗಳಿಸಿದ ಕೀರ್ತಿಗೆ ಪಾತ್ರರಾಗಿದ್ದರು. ಹೆಚ್ಚು ಸಿಕ್ಸರ್‌ಗಳು (20) ಸಿಡಿಸಿದ ಸಾಧನೆಗೆ ವೈಯಕ್ತಿಕ ಪ್ರಶಸ್ತಿಯನ್ನೂ ಪಡೆದಿದ್ದರು. 2020–21ರ ವಿಜಯ ಹಜಾರೆ ಟೂರ್ನಿಯಲ್ಲಿ ಮಧ್ಯಪ್ರದೇಶ ವಿರುದ್ಧ 173 ರನ್ ಗಳಿಸಿದ್ದರು. ಬಿಸಿಸಿಐ ನಡೆಸುವ ಲೀಸ್ಟ್ 'ಎ' ಪಂದ್ಯಗಳಲ್ಲಿ ವಿಕೆಟ್ ಹಿಂದೆ ಹೆಚ್ಚು ಕ್ಯಾಚ್‌ಗಳನ್ನು ಪಡೆದ ದಾಖಲೆಯನ್ನೂ ಹೊಂದಿದ್ದಾರೆ.

ಹೀಗೆ ಉತ್ತಮ ಪ್ರದರ್ಶನ ನೀಡಿದಾಗ ಸಂಭ್ರಮಿಸುವ, ವೈಫಲ್ಯ ಕಂಡಾಗ ಎಲ್ಲರಿಂದಲೂ ಕಲಿಯುವ ಗುಣ ಇಶಾನ್ ಅವರಲ್ಲಿದೆ. ಈ ಕಲಿಕಾ ಗುಣವೇ ಅವರನ್ನು ನಿತ್ಯ ಹೊಸಬರನ್ನಾಗಿ ರೂಪಿಸುತ್ತಿದೆ.

ಸಾಮಾನ್ಯ ವಿಕೆಟ್ ಕೀಪರ್ ಹಾಗೂ ಬ್ಯಾಟ್ಸ್‌ಮನ್ ಆಗಿ ಭಾರತ ತಂಡದಲ್ಲಿ ಸ್ಥಾನ ಪಡೆದ ಮಹೇಂದ್ರ ಸಿಂಗ್ ಧೋನಿ ತಮ್ಮ ಚತುರ ನಾಯಕತ್ವ ಹಾಗೂ ಪ್ರತಿಭೆಯಿಂದಾಗಿ ವಿಶ್ವ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿದರು. ವಿಶ್ವಕಪ್ ಗೆದ್ದುಕೊಟ್ಟ ನಾಯಕ ಎನಿಸಿಕೊಂಡರು. ಒಂದೇ ರಾಜ್ಯದವರಾದ ಧೋನಿ ಹಾದಿಯಲ್ಲಿಯೇ ಈಗ ಇಶಾನ್ ಕೂಡ ಸಾಗುತ್ತಿದ್ದಾರೆ. ಅದಕ್ಕೆ ತಕ್ಕಷ್ಟು ಪ್ರತಿಭೆ ಇಶಾನ್ ಅವರಲ್ಲಿದೆ. 'ಕ್ಯಾಪ್ಟನ್ ಕೂಲ್'ರಂತೆಯೇ ವಿಕೆಟ್ ಹಿಂದೆಯೂ ಇಶಾನ್ ಕಮಾಲ್ ಮಾಡುವ ಭರವಸೆ ಮೂಡಿಸಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65